50

# ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24-02-2021 ರ ನಡವಳಿಗಳು

## ವಿಷಯದ ಸಂಖ್ಯೆ: 695/2020-21

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಾಸರಹಳ್ಳಿ ವಲಯದ ವ್ಯಾಪ್ತಿಯಲ್ಲಿ 2020-2021 ನೇ ಸಾಲಿನ ಪಾಲಿಕೆಯ ಅನುದಾನದಡಿ (ಪಿ-3813) ಬೃಹತ್ ನೀರುಗಾಲುವೆಯ Construction of SWD U Shape Drain at Abbigere Police Station to Juice Factory in Ward No.12 ಕಾಮಗಾರಿಯ ಅಂದಾಜ ಮೊತ್ತ ರೂ.700.00 ಲಕ್ಷಗಳಿಗೆ ತಯಾರಿಸಿ, ಸಂಖ್ಯೆ:012-21-000002 ರಂತೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ.

ಮುಂದುವರೆದು, ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿಯನ್ನು ರೂ.700.00 ಲಕ್ಷಗಳಿಗೆ ಪಡೆಯಲಾಗಿದ್ದು, ಅದರಂತೆ ಮೊತ್ತ ರೂ.609.75 ಲಕ್ಷಗಳಿಗೆ e-procurement ನಲ್ಲಿ ಟೆಂಡರ್ ಆಹ್ವಾನಿಸಲು ಅನುಮೋದನೆ ಪಡೆದು ನಿಯಮಾನುಸಾರ ಟೆಂಡರ್ ಪ್ರಕಟನೆಯನ್ನು ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಲಯ-ಬೃ.ನೀ.ಗಾ) ರವರು ದಿನಾಂಕ:20-08-2020 ರಂದು ಟೆಂಡರ್‌ನ್ನು Two Cover System ನಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ಸದರಿ ಕಾಮಗಾರಿಯ ಟೆಂಡರ್‌ನ ತಾಂತ್ರಿಕ ಬಿಡ್ ಅನ್ನು ದಿನಾಂಕ:14-09-2020 ರಂದು ತೆರೆಯಲಾಗಿದ್ದು, ಟೆಂಡರ್‌ನಲ್ಲಿ ನಾಲ್ಕು ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಸದರಿ ಗುತ್ತಿಗೆದಾರರುಗಳ ತಾಂತ್ರಿಕ ಬಿಡ್ಡುಗಳನ್ನು ತಾಂತ್ರಿಕವಾಗಿ ತುಲನೆ ಮಾಡಲಾಗಿ ಈ ನಾಲ್ಕು ಜನ ಗುತ್ತಿಗೆದಾರರಲ್ಲಿ ಇಬ್ಬರು ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಾಗಿದ್ದು, ತಾಂತ್ರಿಕವಾಗಿ ಅರ್ಹತೆಯನ್ನು ಹೊಂದಿದ್ದ ಬಿಡ್ಡುದಾರರ ತಾಂತ್ರಿಕ ಅರ್ಹತೆಯ ಅನುಮೋದನೆಯನ್ನು ಮುಖ್ಯ ಅಭಿಯಂತರರು ನೀಡಿದ ನಂತರ ಸದರಿ ಇಬ್ಬರು ಗುತ್ತಿಗೆದಾರರು ಸಲ್ಲಿಸಿದ್ದ ಆರ್ಥಿಕ ಬಿಡ್ ಅನ್ನು ದಿನಾಂಕ:12-12-2020 ರಂದು ತೆರೆಯಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ (ಎಸ್.ಆರ್ ದರಪಟ್ಟಿ 2018-19) | ಗುತ್ತಿಗೆದಾರರು ನಮೂದಿಸಿರುವ ಮೊತ್ತ (ರೂ.ಗಳಲ್ಲಿ) | ಅಂದಾಜು ಪಟ್ಟಿಗೆ ಹೋಲಿಸಿದಾಗ ಶೇಕಡವಾರು | ಷರಾ |
|---|---|---|---|---|---|
| 1. | ಶ್ರೀ.ಬಿ.ಎನ್.ಸೋಮಶೇಖರ್ (ಬಿ.ಎನ್.ಎಸ್.ಕನ್‌ಸ್ಟ್ರಕ್ಷನ್ಸ್) | 6,09,75,024.66 | 6,58,41,363.45 | 7.98 ಹೆಚ್ಚು | ಎಲ್-1 |
| 2. | ಪಾಂಡುರಂಗ. ಈ | | 6,62,72,265.11 | 8.68 ಹೆಚ್ಚು | ಎಲ್-2 |

ಶ್ರೀ.ಬಿ.ಎನ್.ಸೋಮಶೇಖರ್ (ಬಿ.ಎನ್.ಎಸ್.ಕನ್ಸ್ಟ್ರಕ್ಷನ್ಸ್), ಗುತ್ತಿಗೆದಾರರು ನಮೂದಿಸಿರುವ ಮೊತ್ತವು ಮಂಜೂರಾದ ಅಂದಾಜಿನಂತೆ ಟೆಂಡರ್‌ಗಿಟ್ಟ ಮೊತ್ತ ರೂ.6,09,75,024.66 ಗಳಿಗೆ ಹೊಲಿಸಿದಾಗ ಶೇ.7.98% ರಷ್ಟು ಹೆಚ್ಚಾಗಿರುವುದರಿಂದ ಮುಖ್ಯ ಅಭಿಯಂತರರು ಸದರಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ಸೂಚಿಸಿದ ಮೇರೆಗೆ ದಿನಾಂಕ:19-12-2020 ರಂದು ಸಂಬಂಧಪಟ್ಟ ಗುತ್ತಿಗೆದಾರರೊಂದಿಗೆ ವಿಸ್ತೃತವಾಗಿ ಮರುಸಂಧಾನ ನಡೆಸಿ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ದರವು ಅಧಿಕವೆಂದು ಪರಿಗಣಿಸಿ, ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ ರೂ.6,58,41,363.45 ವನ್ನು ಕಡಿಮೆಗೊಳಿಸಬೇಕೆಂದು ತಿಳಿಸಲಾಯಿತು.

ನಂತರ ಶ್ರೀ.ಬಿ.ಎನ್.ಸೋಮಶೇಖರ್ (ಬಿ.ಎನ್.ಎಸ್.ಕನ್ಸ್ಟ್ರಕ್ಷನ್ಸ್), ರವರು ಮಾತನಾಡಿ ತ್ಯಾಜ್ಯ ನೀರಿನ ಮಧ್ಯೆ ಕೆಲಸ ಮಾಡುವ ತೊಂದರೆಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗಿಲ್ಲವೆಂದು ಆದರೂ ಸಂಧಾನದ ನಂತರ ತಮ್ಮ ಟೆಂಡರ್ ಮೊತ್ತವನ್ನು ರೂ.6,58,41,363.45 ಗಳ ಮೊತ್ತದಿಂದ ರೂ.6,54,94,016.75 ಮೊತ್ತಕ್ಕೆ ಕಡಿಮೆ ಮಾಡಲು ಒಪ್ಪಿ, ದಿನಾಂಕ:19-12-2020 ರಂದು ಪತ್ರದ ಮುಖೇನ ಕೋರಿರುತ್ತಾರೆ.

ಈ ಮೇರೆಗೆ ಗುತ್ತಿಗೆದಾರರು ದರ ಸಂಧಾನದ ನಂತರ ನಮೂದಿಸಿರುವ ದರಗಳನ್ನು 2018-19ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.7.41% ರಷ್ಟು ಹೆಚ್ಚುವರಿಯಾಗಿದ್ದು, ಸ್ಪರ್ಧಾತ್ಮಕವಾಗಿರುವುದು ಕಂಡು ಬಂದಿರುವುದರಿಂದ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡುವ ಸಂಬಂಧ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಿಸಲು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:19-02-2021 ರ ಟಿಪ್ಪಣಿ.

1. ಸದರಿ ಕಾಮಗಾರಿಯಾದ "Construction of SWD U-shape drain at Abbigere Police Station road to Juice Factory in ward no 12" ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಕೋರಿದೆ.
2. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ.
3. ಪ್ರಸ್ತಾಪಿತ ಕಾಮಗಾರಿಗೆ ಶ್ರೀ.ಬಿ.ಎನ್.ಸೋಮಶೇಖರ್ (ಬಿ.ಎನ್.ಎಸ್.ಕನ್ಸ್ಟ್ರಕ್ಷನ್ಸ್), ಗುತ್ತಿಗೆದಾರರು ನಮೂದಿಸಿರುವ ಸಂಧಾನಿತ ಟೆಂಡರ್ ಮೊತ್ತ ರೂ.6,54,94,016.75 ಗಳಿಗೆ ಅನುಮೋದನೆ.

**ತೀರ್ಮಾನ :** **ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:19-02-2021 ರ ಟಿಪ್ಪಣಿಯನ್ನು ಒಪ್ಪಿದೆ.**

**(ಗೌರವ ಗುಪ್ತ)**
**ಆಡಳಿತಗಾರರು**